## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## ಸಿಸಿ ನಂಬರಃ 942/2020

ಪಿ ಡಬ್ಲ್ಯೂ2

**ಸಾಕ್ಷಿದಾರರ ಹೆಸರು** : ಸಚಿನ್ ಹಳಿಜೋಳಿ
**ತಂದೆಯ ಹೆಸರು** : ಬಾಳಕೃಷ್ಣ
**ವಯಸ್ಸು** : 37 ವರ್ಷ
**ಉದ್ಯೊಗ** : ಮ್ಯಾನೇಜರ್ ( ಆಕ್ಸಿಸ್ ಬ್ಯಾಂಕ್ ಶಾಖೆ ರಾಣೇಬೆನ್ನೂರು )
**ವಾಸ** : ರಾಣೇಬೆನ್ನೂರು.

**ದಿನಾಂಕಃ 19-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

### ಸಾಕ್ಷಿಯ ಮುಖ್ಯ ವಿಚಾರಣೆ ಃ

1. ನಾನು ಆಕ್ಸಿಸ್ ಬ್ಯಾಂಕ್ ರಾಣೇಬೆನ್ನೂರು ಶಾಖೆಯ ಮ್ಯಾನೇಜರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಈ ದಿನ ಸಾಕ್ಷ್ಯ ನುಡಿಯಲು ಹಾಜರಾಗಿದ್ದು, ಈ ಪ್ರಕರಣದ ಆರೋಪಿತರಾದ ಬಸವರಾಜ ಚೌಡಣ್ಣನವರ ಇವರ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಕಂಪ್ಯೂಟರ್ ಮುದ್ರಿತ ಮಾದರಿ ಸಹಿಯನ್ನು ಹಾಜರುಪಡಿಸುತ್ತಿದ್ದೇನೆ. ಬ್ಯಾಂಕ್ ಖಾತೆ ಹೊಂದಿದವರ ಮೂಲ ಮಾದರಿ ಸಹಿಗಳು ನಮ್ಮ ಶಾಖೆಯಲ್ಲಿ ಇಲ್ಲದೇ ಇರುವುದರಿಂದ, ನಮ್ಮ ಶಾಖೆಯ ಕಂಪ್ಯೂಟರ್ ಗಳಲ್ಲಿ ಇರುವ ಸಹಿಯ ಮಾದರಿಯನ್ನು ಹಾಜರು ಪಡಿಸುತ್ತಿದ್ದೇನೆ. ನಮ್ಮ ಬ್ಯಾಂಕ್ ನಲ್ಲಿ ಯಾವುದೇ ವ್ಯಕ್ತಿಯ ಖಾತೆಯನ್ನು ತೆರೆಯುವ ಸಂದರ್ಭದಲ್ಲಿ ನಾವು ಕೇವಲ ಒಂದು ಮಾದರಿ ಸಹಿಯನ್ನು ಮಾತ್ರ ಪಡೆಯುತ್ತೇವೆ.

ಸಾಕ್ಷಿಯು ಹಾಜರು ಪಡಿಸಿದ ದಾಖಲೆಯನ್ನು ಆರೋಪಿತನ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1. ನಾವು ನೀಡಿರುವ ನಿಪಿ-2 ಹಿಂಬರಹವನ್ನು ಈಗ ನಾನು ನೋಡುತ್ತಿದ್ದು, ಸದರಿ ದಾಖಲೆಯ ಪ್ರಕಾರ ಚೆಕ್ ನಲ್ಲಿರುವ ಸಹಿ ಆರೋಪಿತನ ಸಹಿ ಅಲ್ಲ ಎಂದರೆ ನಿಜ. ನಿಪಿ-1 ರಲ್ಲಿರುವ ಚೆಕ್ ನಂಃ 242275 ಇದರ ಹಿಂದಿನ ಹಾಗೂ ನಂತರದ ಚೆಕ್ ಗಳು ಯಾವಾಗ ನಗದೀಕರಣಗೊಂಡಿವೆ ಅಥವಾ ಅಮಾನ್ಯಗೊಂಡಿರುವ ಕುರಿತು ಹೇಳಬಹುದಾ ಎಂದರೆ ಸಾಕ್ಷಿಯು ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. ಸಾಕ್ಷಿಯು ತನ್ನೊಂದಿಗೆ ತಂದಿರುವ ಆರೋಪಿತನ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ನ್ನು ಪರಿಶೀಲಿಸಿ, ಚೆಕ್ ನಂಃ 242274 ಇದು ದಿಃ 22-08-2019 ರಂದು ನಗದೀಕರಣ ಗೊಂಡಿದೆ ಹಾಗೂ ಚೆಕ್ ನಂಃ 242276 ಇದು ದಿನಾಂಕ 03-03-2017 ರಂದು ನಗದೀಕರಣಗೊಂಡಿದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.